ದಿನಾಂಕ : 05-04-2022 ಓ ಎಸ್ ನಂ. 294/2016

ಪಿ. ಡಬ್ಲ್ಯು - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : ಶ್ರೀ ಸಿ.ಎಚ.ಎಚ 1 ನೇ ಪ್ರತಿವಾದಿ ಪರ ವಕೀಲರಿಂದಃ</u>

ದಾವಾ ಆಸ್ತಿಯ ಸರ್ವ ನಂ. 176/ಆ ಆಗಿರುತ್ತದೆ. 176 ರ ಪೋಟಾ ಹಿಸ್ಸಾವನ್ನು ಹೇಳಲು ಬರುವುದಿಲ್ಲ. ನನ್ನ ದಾವೆಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ವಾದ ಪತ್ರದಲ್ಲಿ 176 ನೇ ಸರ್ವೆ ನಂಬರ ಎಂದು ಬರೆಸಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರನ್ನು ತಿದ್ದುಪಡಿ ಮಾಡಲು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ತಿದ್ದುಪಡಿ ಮಾಡಲು ನ್ಯಾಯಾಲಯಕ್ಕೆ ಯಾವುಂದೇ ಅರ್ಜಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತಿದ್ದುಪಡಿ ಆಗುವುದಕ್ಕೆ ನ್ಯಾಯಾಲಯದಿಂದ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಯಾವುದೇ ಆದೇಶ ಇಲ್ಲದೇ ವಾದ ಪತ್ರದಲ್ಲಿ ದಾವಾ ಆಸ್ತಿಯ ಸರ್ವೆ ನಂಬರ ತಿದ್ದಿರುತ್ತೇವೆ ಎಂದರೆ ಸರಿಯಲ್ಲ.

ವ್ಯವಸಾಯಕ್ಕೆ ಸಂಬಂಧಿಸಿದಂತೆ ದಾಖಲೆಗಳಾದ ಪಹಣಿ ಪತ್ರಿಕೆ ಮುಟೇಷನ ಇನ್ನೀತರ ದಾಖಲಾತಿಗಳು ರೇವೆನ್ಯೂ ಇಲಾಖೆಗೆ ಸಂಬಂಧಿಸಿದವು ಎಂದರೆ ಸರಿ. ಮನೆ, ಎನಎ ಪ್ಲಾಟ ಖುಲ್ಲಾ ಜಾಗಾ ಇವುಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮುನಸಿಪಾಲಿಟಿಯವರು ಮತ್ತು ಸಿಟಿ ಸರ್ವೆ ದವರು ನಿಭಾಯಿಸುತ್ತಾರೆ ಎನ್ನುವ ಪ್ರಶ್ನೆಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸರ್ವೆ ನಂ. 176 ಎ ಇದನ್ನು ದಾಖಲೆಗಳನ್ನು ಕಂದಾಯ ಇಲಾಖೆಯವರು ನಿಭಾಯಿಸುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ. 176 ಎ ಇದು ಬೈಲಹೊಂಗಲ ತಾಲೂಕಿನ ಕಂದಾಯ ಇಲಾಖೆಯಲ್ಲಿ ಬರುತ್ತದೆ ಮತ್ತು ದಾಖಲೆಗಳು ಸಹ ಸದರಿ ಇಲಾಖೆಯಲ್ಲಿಯೇ ಸಿಗುತ್ತವೆ ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ. 176 ಎ/4 ಬಿ ಇದು ಮುನಸಿಪಾಲಿಟಿ ಮತ್ತು ಸಿಟಿ ಸರ್ವೆ ಹದ್ದಿಯಲ್ಲಿ ಬರುವುದಿಲ್ಲ ಎಂದರೆ ಸರಿ. ವ್ಯವಸಾಯದ ಜಮೀನು ಎನ ಆದ ನಂತರ ಅದು ಮುನಸಿಪಾಲಿಟಿ ಮತ್ತು ಸಿಟಿ ಸರ್ವೆ ಹದ್ದಿಗೆ ಬರುತ್ತದೆ ಎಂದರೆ ಸರಿ. ಒಂದು ವ್ಯವಸಾಯದ ಜಮೀನನ್ನು ಭೂ ಪರಿವರ್ತನೆಯನ್ನು ಮಾಡಿ(ವ್ಯವಸಾಯೇತರ) ಮಾಡಿದಾಗ ಕಂದಾಯ ಇಲಾಖೆ ದಾಖಲಾತಿಗಳಲ್ಲಿ ಇರುವುದನ್ನು ಕಡಿಮೆ ಮಾಡಿ ಪುರಸಭೆ ಮತ್ತು ಸಿಟಿ ಸರ್ವೆ ಹದ್ದಿಗೆ ಬರುತ್ತದೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಆ ರೀತಿ ಭೂ ಪಪರಿವರ್ತನೆ ಆದ ಜಮೀನಿಗೆ ಪುರಸಭೆ ಮತ್ತು ಸಿಟಿ ಸರ್ವೆ ಯವರು ನಂಬರನ್ನು ಕೊಡುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಆ ರೀತಿ ಪರಿವರ್ತನೆ ಹೊಂದಿದ ಆಸ್ತಿಗೆ ಸಿಟಿ ಸರ್ವೆ ಮತ್ತು ಪುರಸಭೆ ಕಂದಾಯವನ್ನು ತೆಗೆದುಕೊಳ್ಳುವ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ. 176 ಎ/4 ಬಿ ಇದರ ವಿಸ್ತೀರ್ಣ 10 ಗುಂಟೆಗೆ ಸಂಬಧಿಸಿದಂತೆ ತಾವು ನ್ಯಾಯಾಲಯಕ್ಕೆ ನಿಪಿ-1 ರಂತೆ ಪಹಣಿ

ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ. ನಾನು ದಾವೆ ಮಾಡುವ ಕಾಲಕ್ಕೆ ದಾವಾ ಆಸ್ತಿಯು 10 ಗುಂಟೆ ಇರುತ್ತದೆ ಎಂದು ತೋರಿಸುವುದಕ್ಕೆ ನಾನು ಯವುದೇ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ. ನಿಪಿ-6 ರಲ್ಲಿ ದಾವಾ ಆಸ್ತಿಯ ಕ್ಷೇತ್ರ 2 ಗುಂಟೆ ಇರುತ್ತದೆ ಎಂದರೆ ಸರಿ. ವಾದ ಪತ್ರದಲ್ಲಿ ದಾವಾ ಆಸ್ತಿಯು 10 ಗುಂಟೆ ಇದೆ ಎಂದು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 10 ಗುಂಟೆ ಎಂದು ತೋರಿಸುವುದಕ್ಕೆ ನಾನು ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ದಾವಾ ಆಸ್ತಿಯು 10 ಗುಂಟೆ ಎಂದು ತೋರಿಸುವುದಕ್ಕೆ ನಾನು ಯಾವುದೇ ಉತಾರವನ್ನು ಹಿಸ್ಸಾ ಪಾಲನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸತ್ಯ ಹೊರಬರುತ್ತದೆ ಎನ್ನುವ ಕಾರಣಕ್ಕಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ದಾವಾ ಆಸ್ತಿಯು ಉಳವಪ್ಪ ಮತ್ತು ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-6 ನ್ನು ತೋರಿಸಿದಾಗ ವಿರುಪಾಕ್ಷಪ್ಪ ಇವರಿಗೆ 7 ಗುಂಟೆ ಜಮೀನು ಎಂದು ತೋರಿಸುತ್ತದೆ ಎಂದರೆ ಸರಿ. ನಜರು ಚುಕಿನಿಂದ ಪಹಣಿ ಪತ್ರಿಕೆ ತಪ್ಪಾಗಿ ನಮೂದು ಮಾಡಿರುತ್ತೀರಿ ಎನ್ನುವ ವಿಷಯವು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ತಾಂತ್ರಿಕ ದೋಷ ಮತ್ತು ನಜರು ಚುಕು ಆಗಿರುವುದಿಲ್ಲ ನನ್ನ ಜಮೀನು ಕೇವಲ 2 ಗುಂಟೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ನನ್ನ ಪಾಲಿಗೆ 2 ಗುಂಟೆ ಉಳಿದಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ವಿರುಪಾಕ್ಷಪ್ಪ ಸಾದುನ್ನವರಿಗೆ 1 ಎಕರೆ 15 ಗುಂಟೆಯನ್ನು ಮಾರಿ ಉಳಿದ ಜಮೀನು ನನಗೆ ಬಂದಿರುತ್ತದೆ ನಾನವು ಪ್ರತ್ಯೇಕವಾಗಿ ಮಾಲ್ಕಿ ನಾತೆಯಿಂದ ಸ್ವಾದೀನದಲ್ಲಿ ಇರುತ್ತೇವೆ ಎಂದರೆ ಸರಿ. ಎಮಆರ ನಂ. 47/2011-12 ದಿನಾಂಕಃ 29-07-2011 ರಂತೆ ಆಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಎಮಆರ ರೀತ್ಯಾ ವಿರುಪಾಕ್ಷಪ್ಪ ಸಾಧುರವರಿಗೆ ಅವರ ಖರೀದಿ ಪಡೆದುಕೊಂಡು ಜಮೀನು ಹೋಗಿ ನನಗೆ 2 ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ಸರಿ. ಎಮ ಆರ ನಂ. 47/2011-12 ನ್ನು ನಾನು ಸಂಬಂಧಪಟ್ಟ ಪ್ರಾಧಕಾರದ ಮುಂದೆ ಪ್ರಶ್ನೆಯನ್ನು ಮಾಡಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ. 124/4 ಬಿ ಇದ್ದನು ವಿರುಪಾಕ್ಷಪ್ಪವರು ಖರೀದಿಗೆ ಪಡೆದ ನಂತರ ಎನಎ ಪ್ಲಾಟಗಳಾಗಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಎನಎ ಪ್ಲಾಟಗಳು ಮಾರಾಟ ಆಗಿರುತ್ತವೆ ಎಂದರೆ ಸರಿ. ಕೇಲವು ಪ್ಲಾಟಗಳನ್ನು ಆಶ್ರಯ ಮನೆ ಯೋಜನೆಗೆ ಸಂಬಂದಿಸಿದಂತೆ ಮುನಸಿಪಾಲಿಟಿಗೆ ಕೊಟ್ಟಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ.

1 ನೇ ಪ್ರತಿವಾದಿಯರು ದಾವಾ ಆಸ್ತಿ ಸರ್ವೆ ನಂಬರಲ್ಲಿ ಯಾವುದೇ ಅತಿಕ್ರಮಣ ಮಾಡಿಲ್ಲ ಎಂದರೆ ಸರಿ. ನಾನು ವಾದ ಪತ್ರದಲ್ಲಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ಅತಿಕ್ರಮಣ ಮಾಡಿರುತ್ತಾರೆ ಎಂದು ಹೇಳಿರುವ ವಿಷಯ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಅತಿಕ್ರಮಣ ಮಾಡಿದ ಬಗ್ಗೆ ನಾನು ಪೊಲೀಸ ಠಾಣೆ ಮತ್ತು ಎಸಪಿಯವರಿಗೆ ದೂರನ್ನು ಸಲ್ಲಿಸಿ ಅವರು ನಮ್ಮಿಬ್ಬರನ್ನು ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು ಕರೆಯಿಸಿ

ದಾಖಲೆಗಳೆಲ್ಲವನ್ನೂ ನೋಡಿ 1 ನೇ ಪ್ರತಿವಾದಿಯು ಅತಿಕ್ರಮಣ ಮಾಡಿರುವುದಿಲ್ಲ ಎಂದು ನನಗೆ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಾನು ಡಿವಾಯಎಸಪಿ ಕಚೇರಿಯನ್ನು ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟಿರುವುದಿಲ್ಲ. ಆ ರೀತಿ ಮುಚ್ಚಳಿಕೆಯನ್ನು ಬರೆದುಕೋಟ್ಟ ಬಗ್ಗೆ ನನಗೆ ಡಿವಾಯಎಸಪಿ ಕಚೇರಿಯಿಂದ ಹಿಂಬರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ವಿರುದ್ದ ನ್ಯಾಯಾಲಯದಲ್ಲಿ ಯಾವುದೇ ನಿರ್ಬಂಧಕಾಜ್ಞೆ ಆದೇಶ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿರ್ಬಂದಕಾಜ್ಞೆ ಆದೇಶ ಮಾಡಿರುವುದು ಸಂಜು ಬಸವರಾಜ ಭರಮಣ್ಣನವರಿಗೆ ಹೊರತು 1 ನೇ ಪ್ರತಿವಾದಿಗೇ ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನ್ಯಾಯಾಲಯದ ಯಾವುದೇ ಆದೇಶವನ್ನು ಉಲ್ಲಂಘಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನಿರ್ಬಂದಕಾಜ್ಞೆ ಆದೇಶನವನ್ನು ಉಲ್ಲಂಘಿಸಿದ್ದಾನೆ ಎಂದು ನಾನು ಯಾವುದೇ ನ್ಯಾಯಾಂಗ ನಿಂದಣೆ ಪ್ರಕರಣವನ್ನು ದಾಖಲಿಸಿರುವುದಿಲ್ಲ. 1 ನೇ ಪ್ರತಿವಾದಿಯು ಆತನ ಸ್ವಂತ ಜಾಗದಲ್ಲಿ ಮನೆಯನ್ನು ಕಟ್ಟಿಕ್ಕೊಂಡಿರುತ್ತಾನೆ ಎಂದರೆ ಸಾಕ್ಷಿಯು ನನ್ನ ಜಾಗದಲ್ಲ್ ಮನೆಯನ್ನು ಕಟ್ಟಿಕ್ಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ನನ್ನ ಜಾಗದಲ್ಲಿ 1 ನೇ ಪ್ರತಿವಾದಿಯು ಮನೆಯನ್ನು ಕಟ್ಟಿಕ್ಕೊಂಡಿರುತ್ತಾನೆ ಎಂದು ತೋರಿಸುವುದಕ್ಕೆ ನಾನು ನ್ಯಾಯಾಲಕ್ಕೆ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. 1 ನೇ ಪ್ರತಿವಾದಿಯು ನನ್ನ ಒಡೆತನದ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕ್ಕೊಂಡಿರುತ್ತಾನೆ ಎಂದು ತೋರಿಸುವುದಕ್ಕೆ ನಾನು ನ್ಯಾಯಾಲಯಲಕ್ಕೆ ಯಾವುದೇ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮನೇಯನ್ನು ಕಟ್ಟಿಕ್ಕೊಂಡಿರುವುದು ಇಂದಿರಾ ನಗರದ ವಾರ್ಡ ನಂ. 23 ಇರುತ್ತದೆ ಎಂದರೆ ಸಾಕ್ಷಿಯು ಅಲ್ಲಿ ಬರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮನೆಯು ವಾರ್ಡ ನಂ. 23 ರ ವಾಪ್ತಿಯಲ್ಲಿ ಬರುವುದಿಲ್ಲ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಉತಾರ ಮತ್ತು ಸ್ತಗೀತ ಆದೇಶದ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ಪ್ರತಿವಾದಿಯು ಮನೆಯನ್ನು ಕಟ್ಟಿಕ್ಕೊಂಡಿರುವುದು ಪುರಸಭೆ ಹದ್ದಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಮನೆಯನ್ನು ಕಟ್ಟಿಕ್ಕೊಂಡಿರುವುದು ಬೈಲಹೊಂಗಲ ಟಿಎಮಸಿ ನಂ. 2010/10/8 ಬ ಎಂದು ನಂಬರನ್ನು ಕೊಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಟಿಎಮಸಿ ನಂ. 2010/10/8 ಬ ಇದು 1993-94 ನೇ ಸಾಲಿನಿಂದ ಪುರಸಭೆ ದಾಖಲೆಯಲ್ಲಿ ನಮೂದಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಬೈಲಹೊಂಗಲ ಟಿಎಮಸಿ ನಂ. 2010/10/8 ಬ ಇದು ಸರ್ಕಾರದಿಂದ ಮುಂಜೂರಾಗಿ ಕಟ್ಟಿದಂತಹ ಮನೆ ಎಂದರೆ ಸರಿಯಲ್ಲ. ಸದರಿ ಟಿಎಮಸಿ ನಂ. 2010/10/8 ಬ ಇದು ಮೂಲತಃ ಗಂಗಪ್ಪ ಫಕೀರಪ್ಪ ಮಲಕಿನಕೊಪ್ಪ ಇವರಿಗೆ ಸೇರಿರುತ್ತದೆ ಎನ್ನು ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1993-94 ನೇ ಇಸವಿಯಿಂದ ಗಂಗಪ್ಪ ಪಕೀರಪ್ಪ ಸರ್ಕಾರದಿಂದ ಮನಂಜಯಿಾರಾದ ಮನೆಯನ್ನು ಕಟ್ಟಿಕ್ಕೊಂಡು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟಿಎಮಸಿ ನಂ. 2010/10/8 ಬ ಆಸ್ತಿಗೆ ಸಂಬಂಧಿಸಿದಂತೆ ಸದರಿ ಗಂಗಪ್ಪ ಪಕೀರಪ್ಪ ಈತನು ತೆರಿಗೆ ಪಾವತಿ ಮಾಡುವ ವಿಚಾರ ನನಗೆ ಗೊತ್ತಿರುವುದಿಲ್ಲ.

ಸದರಿ ಟಿಎಮಸಿ ನಂ. 2010/10/8 ಬ ಇದಕ್ಕೆ ಗಂಗಪ್ಪ ಪಕೀರಪ್ಪ ಈತನು ನೀರಿನ ಕರ, ವಿದ್ಯುತ ಕರವನ್ನು ತುಂಬಿರುತ್ತಾನೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದೇನೂ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಗಂಗಪ್ಪ ಪಕೀರಪ್ಪ ಮರಣ ಹೊಂದಿದ ನಂತರ ಸದರಿ ಟಿಎಮಸಿ ಆಸ್ತಿಯೂ ವಾರಸ ನಾತೆಯಿಂದ ಆತನ ಮಗ ನಾಗಪ್ಪ ಮತ್ತು ಆತನ ಪತ್ನಿ ಮಲ್ಲವ್ವ ಇರಿಗೆ ಹೋಗಿರುತ್ತದೆ ಎನ್ನುವ ಪ್ರಶ್ನೇಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಟಿಎಮಸಿ ನಂ.2010/10/8 ಬ ಆಸ್ತಿಯು 25-02-2011 ರಂದು ಸದರಿ ನಾಗಪ್ಪ ಮತ್ತು ಮಲ್ಲವ್ವ ಇವರ ಹೆಸರಿಗೆ ದಾಖಲಾಗಿರುತ್ತದೆ ಎನ್ನುವ ವಿಷಯವು ನನಗೆ ಗೊತ್ತಿರುವುದಿಲ್ಲ. ಟಿಎಮಸಿ ರೆಜಿಸ್ಟರನಲ್ಲಿ ಸದರಿ ಟಿಎಮಸಿ ನಂ. 2010/10/8 ಬ ಇದು ನಾಗಪ್ಪ ಮತ್ತು ಮಲ್ಲವ್ವ ಇವರ ಹೆಸರಿನಲ್ಲಿ ದಾಖಲಾಗಿರುವುದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಟಿಎಮಸಿ ಉತಾರದ ಷರಾ ದಲ್ಲಿ ನಾಗಪ್ಪ ಮತ್ತು ಮಲ್ಲವ್ವ ಅವರಿಗೆ ಹಸ್ತಾಂತರ ಆದ ಬಗ್ಗೆ ನಮೂದು ಇರುತ್ತದೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಟಿಎಮಸಿ ನಂ. 2010/10/8 ಬ ಇದಕ್ಕೆ ಮುಖ್ಯಾಧಿಕಾರಿಗಳು ಪುರಸಭೆ ಇವರು ಆದೇಶ ಮಾಡಿದಾಗ ನಾಗಪ್ಪ ಮತ್ತು ಮಲ್ಲವ್ವ ಇವರ ಹೆಸರು ನಮೂದು ಇರುತ್ತದೆ ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ಸದರಿ ಟಿಎಮಸಿ ನಂ. 2010/10/8 ಬ ಇದನ್ನು ನಾಗಪ್ಪ ಮತ್ತು ಮಲ್ಲವ್ವ ಇವರು ದಿನಾಂಕಃ 05-04-2015 ರಂದು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ವಿಷಯ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಟಿಎಮಸಿ ನಂ. 2010/10/8 ಬ ಇದರಲ್ಲಿ 1 ನೇ ಪ್ರತಿವಾದಿಯು ಸಾಲವನ್ನು ತೆಗೆದುಕೊಂಡು ಮನೆಯನ್ನು ಕಟ್ಟಿಕೊಂಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಟಿಎಮಸಿ ನಂ. 2010/10/8 ಬ ಇದನ್ನು ಖರೀದಿ ಮಾಡಿದಾಗಿನಿಂದ ಉತಾರದಲ್ಲಿ ಆತನ ಹೆಸರು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯೂತ್ತಾರೆ. 1 ನೇ ಪ್ರತಿವಾದಿಯು ಕಟ್ಟಿದಂತಹ ಮನೆಯು ಟಿಎಮಸಿ ನಂ. 2010/10/8 ಬ ಇದರಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಟಿಎಮಸಿ ನಂ. 2010/10/8 ಬ ಜಾಗದಲ್ಲಿ ಹಳೆ ಬಿದ್ದಿದ್ದರಿಂದ ಪುರಸಭೆಯಿಂದ ಪರವಾನಗಿಯನ್ನು ಪಡೆದುಕೊಂಡು ಮನೆಯನ್ನು ಕಟ್ಟಿದ್ದಾನೆ ಎಂದರೇ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಟಿಎಮಸಿ ನಂ. 2010/10/8 ಬ ನಲ್ಲಿ ಮನೆಯನ್ನು ಕಟ್ಟಲು ಪುರಸಭೆ ದಿನಾಂಕಃ 19-11-2016 ರಂದು ಕಟ್ಟಡ ಪರವಾನಗಿಯನ್ನು ನೀಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಕಟ್ಟಡ ಪರವಾನಗಿಯಲ್ಲಿ ವಾರ್ಡ ನಂ. 23 ರಲ್ಲಿ ಬರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸರ್ಕಾರಕ್ಕೆ ಸದರಿ ಟಿಎಮಸಿ ನಂ. 2010/10/8 ಬ ಬ ಸಂಬಂಧಿಸಿದಂತೆ ಶುಲ್ಕವನ್ನು ಭರಣಾ ಮಾಡಿರುತ್ತಾನೆ. ಸದರಿ ಟಿಎಮಸಿ ನಂ. 2010/10/8 ಬ ಯಲ್ಲಿ ಕಟ್ಟಿರುವ ಮನೆಗೆ 1 ನೇ ಪ್ರತಿವಾದಿಯು ತೆರಿಗೆ ಪಾವತಿ ಮಾಡುತ್ತಿರುತ್ತಾನೆ ಎನ್ನುವ ಪ್ರಶ್ನೆಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಆಸ್ತಿಯು ದಾವಾ ಆಸ್ತಿ ಸರ್ವೆ ನಂ. 176 ಎ ಇದರಲ್ಲಿ 2 ಗುಂಟೆ ಇರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ

ಸರ್ವೆ ನಂಬರಗೂ ಮತ್ತು ಟಿಎಮಸಿ ನಂ. 2010/10/8 ಬ ಇದಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಟಿಎಮಸಿ ನಂ. 2010/10/8 ಬ ಇದರಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾನೆ ಎಂದರೆ ಸರಿ.

2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**